ದಿನಾಂಕ 01-04-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ.ಎಂ.ಸಿ.ಡಿ ವಕೀಲರಿಂದಃ-

ನಾನು ಎಸ್.ಎಸ್.ಎಲ್.ಸಿ ರವರೆ ಕಲಿತಿದ್ದೇನೆ. ಪ್ರತಿವಾದಿ 1 ನನ್ನ ತಂಗಿ. ಪ್ರತಿವಾದಿ 2 ನನ್ನ ಬಾವ. ನನ್ನ ಸ್ವಂತ ಊರು ಹೊಸೂರು ಗೊಲ್ಲಹಳ್ಳಿ. ರಾಮನಗರದಿಂದ ತಮಿಳುನಾಡಿನ ಹೊಸೂರು 80 ಕೀ. ಮೀಟರ ಅಗುತ್ತದೆ. ದಿನಾಂಕ 22.02.2010 ರ ಕರಾರು ಪತ್ರದಲ್ಲಿ ನಾಮಕಾವಸ್ತೇಯ ಕರಾರು ಪತ್ರ ಎಂದು ನಮೂದು ಇಲ್ಲ. ನನಗೆ ಇಂಗ್ಲೀಷ್ ಓದಲು ಬರುವುದಿಲ್ಲ. ನಿಶಾನೆ ಎನ್-1 ರಲ್ಲಿ ಈ ದಿವಸ ಬಡ್ಡಿ ಹಣ ಎಂದು ನಮೂದು ಇಲ್ಲ. ನಿಶಾನೆ ಎನ್ 1 ರಲ್ಲಿ ನಮೂದಾಗಿರುವ ಹಣವನ್ನು ಪ್ರತಿವಾದಿಗಳು ವಾದಿಗೆ ಯಾವತ್ತೂ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಯಾವ ಯಾವ ದಿವಸ ಹಣ ಕೊಟ್ಟದ್ದು ಎಂದರೆ ದಿನಾಂಕ 11.06.2012 ರಲ್ಲಿ. ನೀವು ಹೇಳಿರುವ ದಿನಾಂ 11.06.2012 ನಿಶಾನೆ ಎನ್-1 ರಲ್ಲಿ ನಮೂದು ಇದೆಯಾ ಎಂದರೆ ಸಾಕ್ಷಿ ನಿಶಾನೆ ಎನ್ 1 ರ ಕೇಳ ಭಾಗದಲ್ಲಿ ಇದೆ ಎಂದು ನುಡಿಯುತ್ತಾರೆ. ನಿಶಾನೆ ಎನ್-1 ರಲ್ಲಿ ನಮೂದಾಗಿರುವ ದಿನಾಂಕ 11.06.2012 ಅದನ್ನು ಹಾಜರುಪಡಿಸಿದ ದಿನಾಂಕ ಎಂದರೆ ಸಾಕ್ಷಿ ಅದೇ ದಿನ ಅದದ್ದು ಎಂದು ನುಡಿಯುತ್ತಾರೆ. ಅದೇ ದಿನ ಹಣ ಕೊಟ್ಟದ್ದು ಎಂದು ನಿಶಾನೆ ಎನ್-1 ರ ಒಕ್ಕಣೆಯಲ್ಲಿ ಇಲ್ಲ. ನಿಶಾನೆ ಎನ್-1 ರಲ್ಲಿ ನಮೂದಿಸಿರುವ ಹಣ ಪ್ರತಿವಾದಿಗಳಿಗೆ ಹೇಗೆ ಬಂತು ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದು ಇಲ್ಲ. ಪ್ರತಿವಾದಿಗಳು ವಾದಿಗೆ ಬರೆದುಕೊಟ್ಟ ನಿಪಿ-1 ಕರಾರು ಪತ್ರದ ದಿವಸ ನಾನು ಹಾಜರು ಇರಲಿಲ್ಲ.

ದಿನಾಂಕ 11.06.2012 ರಂದು ಪ್ರತಿವಾದಿಗಳು ವಾದಿಗೆ ನಿಶಾನೆ ಎನ್-1 ರಲ್ಲಿ ನಮೂದಿಸಿದ ಹಣವನ್ನು ಪಾವತಿಸಿಲ್ಲ, ವಾದಿ ಹಣವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ದಿನಾಂಕ 11.06.2012 ರಂದು ವಾದಿ ಯಾವುದೇ ರಸೀದಿಯನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಂಗಿ ಹಾಗೂ ಬಾವ ದಿನಾಂಕ 22.02.2010 ರಂದು ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದು ಅದರಂತೆ ಕ್ರಯಪತ್ರ ಬರೆದುಕೊಡಬೇಕಾಗುತ್ತದೆಂದು ನಿಶಾನೆ ಎನ್-1ನ್ನು ಸೃಷ್ಟಿಸಿ ಹಾಜರುಪಡಿಸಿ ನನ್ನ ಮುಖಾಂತರ ಸುಳ್ಳು ಸಾಕ್ಷ್ಯ ನುಡಿಸುತ್ತಿದ್ದಾರೆಂದರೆ ಸರಿಯಲ್ಲ. ನಿಶಾನೆ ಎನ್-1 ಒಕ್ಕಣೆಯನ್ನು ರಮೇಶ್ ರವರು ಟೈಪು ಮಾಡಿದರು. ನಿಶಾನೆ ಎನ್-1 ರಲ್ಲಿ ರಮೇಶ ರವರು ಹೆಸರು ಇದೆ. ಅದು ಸ್ಟಾಂಪ್ ವೆಂಡರ ರವರ ಹೆಸರು ಆದರೆ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಶಾನೆ ಎನ್-1 ರಲ್ಲಿ 22.02.2010 ರಲ್ಲಿ ಆಗಿರುವ ಕರಾರು ಪತ್ರವನ್ನು ರದ್ದು ಪಡಿಸಬೇಕೆಂದು ಬರೆದಿಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.